# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1425

**ಮಾನ್ಯ ಸದಸ್ಯರ ಹೆಸರು** : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭಾ ಕ್ಷೇತ್ರ)

**ಉತ್ತರಿಸಬೇಕಾದ ದಿನಾಂಕ** : 16.03.2026

**ಉತ್ತರಿಸಬೇಕಾದ ಸಚಿವರು** : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

| ಪ್ರಶ್ನೆ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಜಿಲ್ಲಾ ಆಸ್ಪತ್ರೆಗಳಲ್ಲಿ ಸಿ.ಟಿ. ಸ್ಕ್ಯಾನಿಂಗ್ ಹಾಗೂ ಎಂ.ಆರ್.ಐ ಸೇವೆಗಳು ಸ್ಥಗಿತಗೊಂಡಿರುವುದರಿಂದ, ರೋಗಿಗಳು ಪರದಾಡುವಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ರಾಜ್ಯದಲ್ಲಿ ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳನ್ನು PPP ಮಾದರಿಯಲ್ಲಿ 2019-2020 ಮೂರು ಸೇವಾದಾರರಿಂದ ರಾಜ್ಯದ ವಿವಿಧ ಜಿಲ್ಲಾ ಆಸ್ಪತ್ರೆಗಳಲ್ಲಿ ಒಟ್ಟು 15 ಸಿ.ಟಿ. ಸ್ಕ್ಯಾನ್ (CT Scan) ಕೇಂದ್ರಗಳು ಹಾಗೂ 06 ಎಂ.ಆರ್.ಐ (MRI) ಕೇಂದ್ರಗಳು ಸೇವೆಗಳನ್ನು ಒದಗಿಸಲಾಗುತ್ತಿದೆ.<br><br>PPP ಸೇವದಾರರಲ್ಲಿ ಒಬ್ಬರಾದ M/s KRSNAA DIAGNOSTICS ರವರು ದಿನಾಂಕ:18.02.2026 ರಿಂದ ಸೇವೆಗಳನ್ನು ಸ್ಥಗಿತಗೊಳಿಸಿದರು ಸಹ, ಎಲ್ಲಾ ತುರ್ತು ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೇವೆಗಳನ್ನು ನಿರಂತವಾಗಿ ಸದರಿ ಜಿಲ್ಲಾ ಆಸ್ಪತ್ರೆಗಳಲ್ಲಿಯೆ ಒದಗಿಸಲಾಗುತ್ತಿದೆ.<br><br>ತುರ್ತು ಇಲ್ಲದೆ ಇರುವ ರೋಗಿಗಳಿಗೆ ನಿರಂತರವಾಗಿ ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳನ್ನು ನೀಡಲು ಜಿಲ್ಲಾ ಆಸ್ಪತ್ರೆಗಳೊಂದಿಗೆ ಸದರಿ ಜಿಲ್ಲೆಗಳಲ್ಲಿಯ SAST Empanelled ವೈದ್ಯಕೀಯ ಸಂಸ್ಥೆಗಳು/ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಿ ಸೇವೆಗಳನ್ನು ನೀಡಲಾಗುತ್ತಿದೆ.<br><br>ಪ್ರಸ್ತುತ PPP ಮಾದರಿಯಲ್ಲಿ ಕಂಡು ಬಂದಿರುವ ನ್ಯೂನ್ಯತೆಗಳ ಹಿನ್ನಲೆಯಲ್ಲಿ CT ಮತ್ತು MRI ಸ್ಕ್ಯಾನ್‌ಗಳ ಶಿಫಾರಸ್ಸು ಪದ್ಧತಿಯನ್ನು (Referral System) ಸುಗಮಗೊಳಿಸಲು ಮತ್ತು ಅನಗತ್ಯ ಸ್ಕ್ಯಾನ್‌ಗಳನ್ನು ತಪ್ಪಿಸಲು ಹಾಗೂ ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಲು, ಸರ್ಕಾರದ ಆದೇಶ ಸಂಖ್ಯೆ: ಆಕುಕ 326 ಎಫ್.ಪಿ.ಆರ್ 2024, ದಿನಾಂಕ: 27.11.2024 ರಲ್ಲಿ SAST ಮೂಲಕ December-2024 ರಿಂದ CT ಮತ್ತು MRI ಸ್ಕ್ಯಾನ್ ಸೇವೆಗಳನ್ನು ಅನುಷ್ಠಾನಗೊಳಿಸಲಾಗಿದೆ.<br><br>ಮುಂದಿನ ದಿನಗಳಲ್ಲಿ ಇನ್ನುಳಿದ ಜಿಲ್ಲೆಗಳಲ್ಲಿ In-House ಮಾದರಿಯಲ್ಲಿ CT ಮತ್ತು MRI ಸ್ಕ್ಯಾನ್ ಸೇವೆಗಳನ್ನು ಅನುಷ್ಠಾನಗೊಳಿಸಲು ಕ್ರಮಹಿಸಲಾಗುತ್ತಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. |
| ಆ) | ಬಂದಿದ್ದಲ್ಲಿ, ಜಿಲ್ಲಾ ಆಸ್ಪತ್ರೆಗಳಲ್ಲಿ ಸಿ.ಟಿ. ಸ್ಕ್ಯಾನಿಂಗ್ ಹಾಗೂ ಎಂ.ಆರ್.ಐ ಸೇವೆಗಳು ಸ್ಥಗಿತಗೊಂಡಿರುವುದರಿಂದ, ಬಡರೋಗಿಗಳು ಖಾಸಗಿ ಲ್ಯಾಬ್‌ಗಳಿಗೆ ದುಬಾರಿ ಶುಲ್ಕ ಪಾವತಿಸಲಾಗದೆ ಮತ್ತು ಬೇರೆ ದೂರದ ನಗರಗಳಿಗೆ ಅಲೆಯ ಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಈ ಸೇವೆಗಳ ಅಲಭ್ಯತೆಯಿಂದಾಗಿ ಬಡರೋಗಿಗಳು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಇದನ್ನು ತಡೆಯಲು ಸರ್ಕಾರ ಸಕಾಲದಲ್ಲಿ ಸೂಕ್ತ ಹಾಗೂ ಅಗತ್ಯಕ್ರಮವಹಿಸದೇ ಈ ರೀತಿಯ ನಿರ್ಲಕ್ಷ್ಯತೆ ತೋರಲು ಕಾರಣಗಳೇನು; | |
| ಇ) | ಬಡವರು, ಮಧ್ಯಮ ವರ್ಗದವರು ಆರೋಗ್ಯ ಸಮಸ್ಯೆಗಳ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗಳನ್ನೇ ಸಂಪೂರ್ಣವಾಗಿ ಅವಲಂಬಿಸಿದ್ದು, ಸಕಾಲದಲ್ಲಿ ಸಿ.ಟಿ ಸ್ಕ್ಯಾನಿಂಗ್ ಹಾಗೂ ಎಂ.ಆರ್.ಐ ಸೇವೆಗಳು ಸಿಗದೆ ಸಂಕಷ್ಟ ಎದುರಿಸುತ್ತಿದ್ದು, ಇದನ್ನು ತಡೆಯಲು ಸರ್ಕಾರ ಇದುವರೆಗೆ ಕೈಗೊಂಡ ಕ್ರಮವೇನು; | |
| ಈ) | ಸಿ.ಟಿ. ಸ್ಕ್ಯಾನಿಂಗ್ ಹಾಗೂ ಎಂ.ಆರ್.ಐ. ಸೇವೆಗಳು ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಯಾವುದೇ ಅಡೆತಡೆ ಅಥವಾ ವ್ಯತ್ಯಯ ಇಲ್ಲದೆ ರೋಗಿಗಳಿಗೆ ಸಕಾಲದಲ್ಲಿ ಹಾಗೂ ನಿರಂತರವಾಗಿ ಸಿಗುವಂತೆ ಮಾಡಲು ಯಾವ ಕಾಲಮಿತಿಯೊಳಗೆ ಅಗತ್ಯ ಕ್ರಮವಹಿಸಲಾಗುವುದು? | |

**ಸಂಖ್ಯೆ: ಆಕುಕ 20 ಎಫ್‌ಪಿಇ 2026**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು